ರಮಿಸಿ ನಾನು ಅದೇ ಶಿಷ್ಯನೊಡನೆ ಹಿಂದಿರುಗುವಲ್ಲಿ ಆ ಶಿಷ್ಯನೂ ದಾರಿಯುದ್ದಕ್ಕೂ ನನ್ನನ್ನು ಮುಟ್ಟಿತಟ್ಟಿ ಮುಲುಕಾಡುತ್ತಿದ್ದ. ಅದು ಹಾಗಿರಲಿ, ಒಂದು ದಿನ ತಡರಾತ್ರಿ ನಾನು ಮಹಾಸ್ವಾಮಿಗಳ ಮಾಡದ ಮೇಲಿನ ಅವರ ಪ್ರತ್ಯೇಕ ಶಯ್ಯಾತಲ್ಪದಿಂದ ಮೇಲೆದ್ದು ಇನ್ನೇನು ಹೊರಡಬೇಕು ಅಂದು ನನ್ನ ಅಂಗಾಂಗ ವಿಚಲಿತ ವಸ್ತ್ರವನ್ನೆಲ್ಲ ಸರಿಪಡಿಸಿಕೊಳ್ಳುವಲ್ಲಿ ಯಾರೋ ಗವಾಕ್ಷದಿಂದ ನಮ್ಮಿರ್ವರ ಏಕಾಂತವನ್ನು ಇಣುಕಿ ನೋಡುತ್ತಿರಲಾಗಿ ನಾನು ಒಂದುಕ್ಷಣ ಬೆಚ್ಚಿಬಿದ್ದೆ. ಆಮೇಲೆ ನನಗೇನೂ ಅಂಥ ಭಯವಾಗಲಿಲ್ಲ. ಹೇಳಿಕೇಳಿ ನಾನು ಗಣಿಕಾ ಸ್ತ್ರೀ. ಹಗಲಿಗಿಂತ ನಿಶೆಯಲ್ಲೇ ನನ್ನ ಓಡಾಟ, ವ್ಯವಹಾರವಲ್ಲವೆ? ಅತ್ತ ಗುರುಗಳು ಗವಾಕ್ಷದೆಡೆ ನೋಡಿ ಅವರ ಅಂಗೋಪಾಂಗ ನಡುಗುತ್ತಿರುವಂತೆ ಕಂಡಿತು. ನಾಲಿಗೆಯ ದ್ರವ ಒಣಗಿ ಮಾತೇ ಹೊರಡದೆ ತೊದಲುವವರಂತೆ ಕಂಡರು. ಮತ್ತೊಮ್ಮೆ ನಾನು ಆ ಗವಾಕ್ಷದೆಡೆ ಸರಿಯಾಗಿ ನಿಟ್ಟಿಸಿ ನೋಡಲಾಗಿ ಅವನು ನನಗೆ ಪರಿಚಿತನೇ ಆಗಿದ್ದ ಲುಪ್ತಕ. ರಾತ್ರಿಯ ಹೊತ್ತು ಶ್ರೀಮಂತರ ಹೊರಬಿಡಾರದ ಏಕಾಂತ ಸ್ಥಳಗಳಿಗೆ ಹೋಗುವಾಗ ಅವನೂ ಧನಿಕರ ಮನೆಗೆ ಕನ್ನವಿಕ್ಕಲು ಬರುತ್ತಿದ್ದ. ನಾವೆಲ್ಲ ಉಳ್ಳಾದವರ ಮನೆಗೆ ಕನ್ನವಿಕ್ಕುತ್ತಿದ್ದವರೇ ತಾನೇ! ಅಂಥ ವೇಳೆ ವಿಟ ಪುರುಷರ ಮನೆಯ ವರೆಗೆ ನನ್ನ ಬೇರಾರು ಹಿಂಬಾಲಿಸದಂತೆ ಎಚ್ಚರಿಕೆ ವಹಿಸುತ್ತಿದ್ದವನು ಅವನೇ! ಹಾಗಾಗಿ ಅಂಥದೇನೂ ವಿಚಲಿತ ಭಾವವಿಲ್ಲದೆ ನಾನು ಸುಮ್ಮನೇ ನಿಂತಿರುವಲ್ಲಿ ಗವಾಕ್ಷದ ಮಚ್ಚಿನಲ್ಲಿ ಕೂತಿದ್ದ ಅವನು, 'ಓ ದೇವರೇ, ಸುಖದ ಸುಪ್ಪತ್ತಿಗೆಯಲ್ಲಿ ಧರ್ಮ ಹೊರಳಾಡುತ್ತಿದೆಯಲ್ಲ' ಅಂದು ಕೂಗಿಬಿಟ್ಟ. ಲುಪ್ತಕನನ್ನು ನೋಡುತ್ತ ಬಹಳ ಕ್ರುದ್ಧರಾದ ಮಹಾಸ್ವಾಮಿಗಳು ನಾಲಿಗೆಗೆ ಕೊಂಚ ಶಕ್ತಿ ತಂದುಕೊಂಡು, 'ಏನೆಲವೋ ಖೂಳ, ಈ ಸರಿಹೊತ್ತಿನಲ್ಲಿ ನೀನು ಈ ಧರ್ಮ ಮಂದಿರಕ್ಕೆ ಕನ್ನಗತ್ತರಿ ಹಿಡಿದು ಬಂದಿರುವೆಯಾ' ಅಂದರು. ಲುಪ್ತಕ, 'ಇಲ್ಲ ಇಲ್ಲ, ಖಂಡಿತಕ್ಕೂ ಇಲ್ಲಾ, ಈ ಮೇಲು ಮಾಡದಲ್ಲಿ ಸಣ್ಣಗೆ ಬೆಳಕು ಕಂಡಿತಲ್ಲ, ಅಮಾವಾಸೆಯ ಈ ಸರಿಗತ್ತಲಲ್ಲಿ ನನ್ನಂತೆಯೇ ಯಾರಾದರೂ ಈ ಧರ್ಮದ ಮನೆಗೆ ಕನ್ನವಿಡಲು ಏರಿಬಂದಿದ್ದಾರೆಯೇ ಎಂಬ ಶಂಕೆಯಾಯಿತು. ಅಂಥದ್ದೇನಾದರೂ ಆಗಿದ್ದರೆ ಆ ಧರ್ಮಗಳ್ಳನನ್ನು ಹಿಡಿದು ಇಲ್ಲಿಯೇ ಕಂಬಕ್ಕೆ ಕಟ್ಟಿ ಹೋಗುವ ಅಂದು ಬಂದೆ. ಆದರೆ ಇಲ್ಲಿ...' ಅಂದನು.

ನಿತ್ಯಾನಂದ ವಾರಿಧಿಗಳು ಆಗ ಅವನನ್ನು ಕೋಣೆಯತ್ತಲೇ ಬರಲು ಹೇಳಿ ನನಗೆ ಕೊಟ್ಟಷ್ಟೇ ಧನಕನಕವನ್ನಿತ್ತು ಕಳುಹಿಸಿದರು. ಲುಪ್ತಕನು ಒಂದು ಕೂಗಳತೆ ಹೋಗಿದ್ದನೋ ಇಲ್ಲವೋ ಗುರುಗಳು ನನ್ನನ್ನು ಮನೆಗೆ ಕಳುಹಿಸಿ, ಮಂದಿರದಲ್ಲೆಲ್ಲ ಬೊಬ್ಬೆ ಹಾಕಿ ಅವನನ್ನು ಹೆಡೆಮುರಿ ಕಟ್ಟಿಸಿ ತಂದು ತಮ್ಮ ಪದತಲದಲ್ಲಿ ಬೀಳಿಸಿಕೊಂಡರು. 'ಎಲಾ ಬಲುಗಳ್ಳನೇ ಧರ್ಮಸಂಸ್ಥಾನದಲ್ಲಿ ಭಕ್ತರು ನೀಡಿದ ದುಡ್ಡುದುಗ್ಗಾಣಿಯನ್ನು ಹೊತ್ತೊಯ್ಯಲು ಬಂದೆಯಾ ನಿನಗೆಷ್ಟು ಧೈರ್ಯ' ಅಂದು ಶಿಷ್ಯರಿಗೆ, 'ಇವನನ್ನು ಪ್ರಭುಗಳ ಸಮ್ಮುಖಕ್ಕೆ ಸಾಕ್ಷಿ ಸಮೇತ ಸೆಳೆದೊಯ್ಯಿರಿ' ಎಂದರು. ಅದಾಗ ಧರ್ಮಗುರುಗಳಲ್ಲಿ ತಲೆಯ ತುಂಬ ತುಂಬಿಕೊಂಡ ಭಯವೆಂದರೆ ಲುಪ್ತಕನು ವಿದಿಶಾ ನಗರವೆಲ್ಲ ತಮ್ಮ ಅನಾಚಾರವನ್ನು ಡಂಗುರವಿಲ್ಲದೇ ಸಾರಿ ಬಿಡುವನೋ ಎಂಬುದಾಗಿದ್ದಿತು. ಅವನ ಶಿರಚ್ಛೇದನದಲ್ಲಿ ತಮ್ಮ ಧರ್ಮಗೌರವ ಉಳಿಯುತ್ತದೆಂದುಕೊಂಡರು. ಆದರೆ, ಅದನ್ನೆಲ್ಲ ಕಂಡ ನನಗೆ ಪಾಪಭೀತಿ ಕಾಡುತ್ತಿದೆ. ನ್ಯಾಯಾಸ್ಥಾನವು ಸಂಚಿನ ವಂಚನೆಗೂ, ಪಕ್ಷಪಾತಕ್ಕೂ, ಪಾಪಕ್ಕೂ ಪಕ್ಕಾಗಬಾರದೆಂದು ತಮ್ಮ ಪಾದದಲ್ಲಿ ಬಿನ್ನವಿಸಲು ಬಂದೆನೆಂದು ಪಾಠಕೆ ಸತ್ಯಘಟನೆಯನ್ನು ಅರುಹಿದ್ದರಿಂದ, ನಾನು ಆ ಲುಪ್ತಕನನ್ನು ಶಿರಚ್ಛೇದನ ಶಿಕ್ಷೆಯಿಂದ ಪಾರುಗಾಣಿಸಿ, ಸೆರೆಮನೆಗೆ ತಳ್ಳಿಸಿದೆನೆಂದ ಅಜಿತಸೇನರು, 'ಪ್ರಭೂ, ನನ್ನ ದೂರಾಲೋಚನೆಯ ಸಂಗತಿಯನ್ನೂ ಒಂದು ಕ್ಷಣ ಆಲಿಸುವವರಾಗಿ, ಆ ಕಳ್ಳನೂ ಒಂದಲ್ಲಾ ಒಂದು ದಿನ ನಮ್ಮ ಸಹಾಯಕ್ಕೆ ಖಂಡಿತ ಬರುವವನೇ' ಅಂದರು.